
ನಿಕೋಲಾಯ್ ಚೌಸೆಸ್ಕೋ ಬಹುದಿನಗಳಿಂದ ಕಾಣುತ್ತಿದ್ದ ಒಂದು ಕನಸು ತಮ್ಮ ದೇಶದ ಪ್ರಜೆಗಳಿಗೆ ಏನಾದರೂ ಮಾಡಬೇಕೆಂದು; ರೊಮೇನಿಯನ್ನರು ತಮ್ಮ ನಾಯಕನ ಹಿರಿಮೆಯನ್ನು, ಬುದ್ಧಿವಂತಿಕೆಯನ್ನು ಅಹೋರಾತ್ರಿ ನೆನೆಸಿಕೊಂಡು ಜಾಗರಣೆ ಮಾಡಬೇಕೆನ್ನುವಷ್ಟು ದೊಡ್ಡದನ್ನು ಏನಾದರೂ ಮಾಡಬೇಕೆಂದು ಕನಸು ಕಾಣುತ್ತಿದ್ದರು. 1970ರ ಮೊದಲ ಭಾಗದಲ್ಲಿ ಅವರಿಗೊಂದು ದೊಡ್ಡ ಯೋಜನೆ ಹೊಳೆಯಿತು. ಹಾಂ, ನಾನು ಒಂದು ಅರಮನೆ ಕಟ್ಟುವೆ. ದೊಡ್ಡದು. ಯೂರೋಪಿನಲ್ಲೇ ದೊಡ್ಡದು. ರೊಮೇನಿಯಾದ ಜನರಿಗೆ ಅವರ ನೆಚ್ಚಿನ ನಾಯಕನಿಂದ ಒಂದು ಉಡುಗೊರೆ.



ಇದೋ ನೋಡಿ. ಇಲ್ಲೇ ಇದೆ. ಕಪ್ಪು ರಂಧ್ರದ ಎಲ್ಲ ಗುಣಗಳಿರುವ ಒಂದು ದೊಡ್ಡ ಕಟ್ಟಡ. ಮಾನವರಿಗೆ ಬೇಕಾದಕ್ಕಿಂತ ಮತ್ತು ಅವರಿಗೆ ಬೇಕಾದ ಅಳತೆಗಿಂತ ಬಹಳ ಪಟ್ಟು ದೊಡ್ಡದಾದ ಕಟ್ಟಡ. ಪಾರ್ಲಿಮೆಂಟ್ ಅರಮನೆ ಅಥವಾ ನಿಮಗೆಲ್ಲರಿಗೂ ಇಷ್ಟವಾದರೆ, ಪ್ರಜೆಗಳ ಅರಮನೆ. ಅದನ್ನು ಯೋಚಿಸಿದರೆ ಸಹ ನನಗೆ ಹೊಟ್ಟೆಯಲ್ಲಿ ಕಿವಿಚಿದಂತಾಗುತ್ತದೆ. ಅದರ ಸುತ್ತ ಇರುವ ಬೇಲಿಯ ಗುಂಟ ನಡೆದು, ಆ ಅರಮನೆಗೆ ಇರುವ ಒಂದೇ ಬಾಗಿಲಿನ ಹತ್ತಿರ ಬಂದಾಗ ಟ್ರೆಡ್ ಮಿಲ್ಲಿನ ಮೇಲೆ ನಡೆದ ಅನುಭವ.

ಅರಮನೆಯನ್ನು ನನಗೆ ತೋರಿಸುತ್ತಿರುವ ಗೈಡ್ ಆ ಅರಮನೆಯ ಅಗಾಧತೆಯನ್ನು ನನಗೆ ವಿವರಿಸುತ್ತಾ, ನಮ್ಮ ಪ್ರವಾಸಿ ಗುಂಪಿನ ಅನಾಮಧೇಯ ಜನರಿಗೆ, ಅದರ ಸೌಂದರ್ಯ ಮತ್ತು ಅಗಾಧತೆಯನ್ನು ಆಸ್ವಾದಿಸಬೇಕೆಂದು ಆಗ್ರಹಿಸುತ್ತಾಳೆ. ನಮ್ಮಲ್ಲಿ ಯಾರಿಗಾದರೂ ಕಟ್ಟಡದ ಬಗ್ಗೆ ಅನುಮಾನ ಮೂಡಿ, ಅದು ನಮ್ಮ ಮುಖದಲ್ಲಿ ಪ್ರಕಟವಾದಾಗ, ನಮ್ಮೆಡೆಗೆ ನಕ್ಕು ನಿಮಗೇನೂ ಗೊತ್ತಿಲ್ಲ ಎನ್ನುವ ಭಾವ ಪ್ರಕಟಿಸುತ್ತಾಳೆ. ಅದರ ಗೋಡೆಗಳಿಗೆ ಹಾಕಲು ಎಷ್ಟು ಕಿಲೋಗ್ರಾಮ್ ಚಿನ್ನ ಖರ್ಚಾಯಿತು, ಅದರ ಕಿಟಕಿ ಬಾಗಿಲುಗಳಿಗೆ ಎಷ್ಟು ಮೀಟರ್ ಬಟ್ಟೆ ಖರೀದಿಸಲಾಯಿತು ಮತ್ತು ಎಷ್ಟು ಜನ ಹೆಂಗಸರು ಅದರ ಕರ್ಟನ್‌ಗಳ ಮೇಲೆ ಇರುವ ಕಸೂತಿ ಮಾಡಿದರು ಇತ್ಯಾದಿ. ಎಷ್ಟಾದರೂ ರೊಮೇನಿಯಾ ದೇಶದ ಹೆಗ್ಗಳಿಕೆ ಎಂದರೆ ಗಾತ್ರ, ಅಗಲ, ಉದ್ದ ಮತ್ತು ಭಾರ ಅಲ್ಲವೇ?

ಚೌಸೆಸ್ಕೋ ಸಾಹೇಬರ ಪಿರಮಿಡ್ಡಿನಷ್ಟು ದೊಡ್ಡ ಆಸೆಗೆ ಸಾಕ್ಷಿಯಾಗಿದ್ದ ಈ ಪ್ರಜೆಗಳ ಅರಮನೆ ಬುಖಾರೆಸ್ಟ್‌ನಲ್ಲಿ ಒಂದು ದೊಡ್ಡ ಪ್ರವಾಸಿ ತಾಣ. ಶುದ್ಧ ಚಿನ್ನದಿಂದ ಮಾಡಬೇಕೆಂದು ಹೊರಟಿದ್ದ, ಚೊಸೆಸ್ಕೋನ ಹುಚ್ಚುತನ ಮತ್ತು ಗರ್ವಕ್ಕೆ ಸಾಕ್ಷಿಯಾಗಿದ್ದ ಈ ಕಟ್ಟಡ, ಇಂದು ವೈಭವೀಕೃತ ಗೋರಿ. ಅದನ್ನು ನೋಡುತ್ತ, ಈ ನೆಲದ ಮೇಲೆ ಚಂದ್ರನಿಂದ ಸ್ಫೂರ್ತಿ ಪಡೆದ ಕಟ್ಟಡವನ್ನು, ಸಾವಿರಾರು ಮನೆಗಳು, ಹಲವಾರು ಚರ್ಚ್‌ಗಳು, ಕೆಲವು ಶಾಲೆ ಮತ್ತು ಆಸ್ಪತ್ರೆಗಳನ್ನು ಕೆಡವಿದ ಮೇಲೆ, ಎಷ್ಟು ಸುಲಭವಾಗಿ ಕಟ್ಟಬಹುದು ಎಂದು ಜನರಿಗೆ ಮನವರಿಕೆಯಾಗುತ್ತದೆ.

ಹೌದು ಹೌದು. ಇದೆಲ್ಲದರ ಬಗ್ಗೆ, ಎಷ್ಟು ಜನರಿಗೆ ಹಾನಿಯಾಯಿತು; ಎಷ್ಟು ಕಟ್ಟಡಗಳ ನಾಶವಾಯಿತು ಎಂದು ಆ ಗೈಡು ಹೇಳುವುದಿಲ್ಲ. ಬಹುಶಃ ಅವಳಿಗೆ ಗೊತ್ತಿದ್ದರೂ, ಅದು ಅವಳಲ್ಲೇ ಉಳಿದಿರಬೇಕು. ಆ ಪ್ರಜೆಗಳ ಅರಮನೆಯ ಪ್ರವೇಶ ಪತ್ರದಲ್ಲಿ ಮುದ್ರಿಸಿರುವುದು ಆ ಕಟ್ಟಡದ ಎಲ್ಲ ಆಯಾಮಗಳ ಅಗಾಧತೆಯ ಬಗ್ಗೆ ಎಷ್ಟು ಜನ ಕೆಲಸ ಮಾಡಿದರು, ಎಷ್ಟು ಟನ್ ಸಾಮಗ್ರಿ ಬೇಕಾಯಿತು, ಎಷ್ಟು ಕಿಲೋಮೀಟರ್ ಕನ್ನಡಿಗಳಿವೆ, ಅಲ್ಲಿರುವ ಕಾರ್ಪೆಟ್ ತೊಳೆಯಲು ಎಷ್ಟು ಸಮಯ ಹಿಡಿಯುತ್ತದೆ ಇತ್ಯಾದಿ. ಆ ಪ್ರವೇಶ ಪತ್ರವನ್ನು ಓದಿದರೆ, ರೊಮೇನಿಯಾದಲ್ಲಿ